ಅನಿವಾರ್ಯವಾಗಿ ನಾನು ಈ ಪ್ರಶ್ನೆಯನ್ನು ಕೇಳಲೇಬೇಕಿರುವುದರಿಂದ ಸರ್ಕಾರದಿಂದ ನಿರ್ದಿಷ್ಟ ಉತ್ತರಕ್ಕೆ ಒತ್ತಾಯಿಸಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್‌ರವರು ಸದನದ ಬಾವಿಗೆ ಬಂದು ಧರಣಿ ಹೂಡಿದರು)

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಇದಕ್ಕಾಗಿ ಧರಣಿ ಕೂರುವ ಅಗತ್ಯವಿಲ್ಲ. ತಾವು ವಿಷಯ ಪ್ರಸ್ತಾಪಿಸಿ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಎಲ್ಲರೂ ಈ ರೀತಿ ಧರಣಿ ಕೂರುವುದಾರೆ ಸರ್ಕಾರವನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ನಿರಾಶ್ರಿತ ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ಶೇಕಡ 5 ರಿಂದ 10 ರಷ್ಟು ಮೀಸಲಾತಿ ಕಲ್ಪಿಸುವುದಾಗಿ ಸರ್ಕಾರ ಭರವಸೆ ನೀಡಿದೆಯೆಂದು ತಾವು ಈಗ ಹೇಳಿರುವುದರಿಂದ ಸರ್ಕಾರ ಸದನದಲ್ಲಿ ಅಂತಹ ವಚನವನ್ನು ಏನಾದರೂ ಕೊಟ್ಟಿದ್ದರೆ ಖಂಡಿತವಾಗಿಯೂ ಅದನ್ನು ನೆರವೇರಿಸುತ್ತೇವೆ. ಅಲ್ಲದೆ, ಸರ್ಕಾರಿ ಭರವಸೆಗಳ ಸಮಿತಿಯು ಇದ್ದು, ಸದರಿ ಸಮಿತಿಯಲ್ಲಿಯೂ ತಾವು ಆ ಕುರಿತು ಪ್ರಸ್ತಾಪಿಸಬಹುದು. ಇನ್ನು ಉಳಿದಂಥ ವಿಚಾರವಾಗಿ ಮಾತನಾಡಿ 'ನಾವು ಹೇಳಿರುವುದರ ಬಗ್ಗೆ 'ಅಪ್ಪಟ ಸುಳ್ಳು' ಎಂದು ಏನು ಹೇಳಿದ್ದೀರಿ, ಈ ಬಗ್ಗೆ ಹೇಳುವುದಾದರೆ ಸರ್ಕಾರ ಪರಿಹಾರ ಕೈಕೊಡದಿದ್ದರೆ ಯಾವ ನಿರಾಶ್ರಿತರೂ ಕೂಡ ಪುನರ್ ನಿವೇಶನ ಕೇಂದ್ರಕ್ಕೆ ಹೋಗಲು ಸಾಧ್ಯವಿಲ್ಲ. ಸರ್ಕಾರ ಕೈಗೊಂಡಿರುವ ಪರಿಹಾರ ಕ್ರಮದ ವಿಚಾರದಲ್ಲಿ ವಿಶ್ವಬ್ಯಾಂಕ್‌ನವರು ಸಹ ಮೆಚ್ಚುಗೆ ಪತ್ರ ಕೊಟ್ಟಿದ್ದಾರೆ. ಯೋಜನೆಯಡಿ ಭೂಮಿ ಕಳೆದುಕೊಂಡವರಿಗೆ ನೀರಾವರಿ ಭೂಮಿಯಾಗಿದ್ದರೆ ಒಂದು ಎಕರೆಗೆ ರೂ. 1 ಲಕ್ಷ 10 ಸಾವಿರ ಹಾಗೂ ಖುಷ್ಕಿ ಜಮೀನಿಗೆ ಸಂಬಂಧಿಸಿದಂತೆ ರೂ. 60 ಸಾವಿರದಂತೆ ಸವಕಳಿ ಮುರಿಯದ ರೀತಿಯಲ್ಲಿ ಪರಿಹಾರ ಕೊಟ್ಟಿದ್ದು ಮನೆಗಳನ್ನು ಕಳೆದುಕೊಂಡವರಿಗೆ ಪುನರ್ ನಿವೇಶನಕ್ಕೆ ಸಂಬಂಧಿಸಿದಂತೆ ಪೂರಕವಾದ ಎಲ್ಲಾ ರೀತಿಯ ನಾಗರೀಕ ಸೌಲಭ್ಯಗಳನ್ನು ಒದಗಿಸಿರುವುದು ತಮಗೆ ಗೊತ್ತಿರುವ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಆಲಮಟ್ಟಿ ಅಣೆಕಟ್ಟು ಪ್ರದೇಶಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ತಮ್ಮನ್ನು ಹಾಗೂ ಇತರ ಶಾಸಕರುಗಳನ್ನು ಕರೆಸಿ ಮಾತನಾಡಿರುವ ಸಂಗತಿ ತಮಗೆ ವೇದ್ಯವಾಗಿದೆ. ಅಲ್ಲದೆ, ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಾವು ಅಭಿನಂದಿಸಿದ್ದೀರಿ. ಆದುದರಿಂದ, ತಾವು ಅಪ್ಪಟ ಸುಳ್ಳು ಎಂದು ಹೇಳಿರುವುದು ಸರಿಯಾದ ಮಾತಲ್ಲವೆಂದು ಹೇಳುತ್ತೇನೆ. ಈಗ ನಾನು ತಮ್ಮ ಮೂಲಕ ಅವರಲ್ಲಿ ಅರಿಕೆಮಾಡಿಕೊಳ್ಳುತ್ತಿರುವುದೇನೆಂದರೆ, ತಮ್ಮ ಧರಣಿ ಕೈಬಿಟ್ಟು ತಾವು ತಮ್ಮ ಆಸನಕ್ಕೆ ಹಿಂತಿರುಗಬೇಕು. ಮಾನ್ಯ ಮಂತ್ರಿಗಳು ಬಂದ ತಕ್ಷಣವೇ ತಮ್ಮ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಜಶೇಖರ ವೀರಣ್ಣ ಶೀಲವಂತ : ನಮ್ಮ ಜಿಲ್ಲೆಯ ಎಲ್ಲಾ ಶಾಸಕರುಗಳು ಒಟ್ಟುಗೂಡಿ ಬಹಳ ಸಾರಿ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ನಾಗೇಗೌಡರನ್ನು ಭೇಟಿಯಾಗಿ ಪ್ರಸ್ತಾಪಿಸಿದ್ದರೂ 'ಈ ಸಲ ಮಾಡುತ್ತೇವೆ, ಇನ್ನೊಂದು ಸಲ ಮಾಡುತ್ತೇವೆ' ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಈ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಕಳುಹಿಸಿರುವ ನೋಟೀಸಿಗೆ ತಾವು ಸಹಿ ಹಾಕಿಲ್ಲ. ತಾವೆಲ್ಲಾ ಶೂನ್ಯ ವೇಳೆಯಲ್ಲಿ ಈ ರೀತಿ ಮಾತನಾಡಿದರೆ ಹೇಗೆ?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ಹೂಡಿದ್ದ ಮಾನ್ಯ ಸದಸ್ಯರಾದ ಶ್ರೀ ಪ್ರಹ್ಲಾದ್